ಶ್ರೀ ಸಿ. ಬೈರೇಗೌಡ : ನಾಳೆ ದಿವಸ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ರೈತರು ತಮ್ಮ ಮನೆ ಮುಂದೆ ಧರಣಿ ಸತ್ಯಾಗ್ರಹ ಮಾಡಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಾಳೆ ಬರುತ್ತಿದ್ದಾರೆ. ಪ್ರತಿದಿನ ಇಲ್ಲಿ ವಿದ್ಯುತ್ ಬಗ್ಗೆ ಚರ್ಚೆಯನ್ನು ಮಾಡುತ್ತಲೇ ಇದ್ದೇವೆ. ಆದರೆ ಯಾವುದೇ ಪ್ರಯೋಜನವಾಗಿಲ್ಲವಾದ್ದರಿಂದ ಸರ್ಕಾರ ಇದನ್ನು ತೀವ್ರವಾಗಿ ಪರಿಗಣಿಸಿದಂತೆ ಭಾಸವಾಗುತ್ತಿಲ್ಲ. ಏಕೆಂದರೆ ಪ್ರತಿದಿನ ತೊಂದರೆಯಾಗುತ್ತಲೇ ಇದೆ. ಸದನದ ಸಮಿತಿಯ ವರದಿ ಬಂದಿದೆ, ಆ ವರದಿ ಸರ್ಕಾರದ ಕೈಯಲ್ಲಿದೆ. ನಾವೂ ಕೂಡ ಪ್ರತಿದಿನ ಒತ್ತಾಯ ಮಾಡುತ್ತಿದ್ದೇವೆ. ಇಷ್ಟೆಲ್ಲಾ ಆದರೂ ಕೂಡ ಇನ್ನೂ ತೊಂದರೆ ಜಾಸ್ತಿಯಾಗುತ್ತಿದೆ. ಆದ್ದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲಾದರೂ ಇದ್ದರೆ ಅವರನ್ನು ಕರೆಯಿಸಿ ಒಂದು ಹೇಳಿಕೆಯನ್ನು ಕೊಡಿಸುವುದು ಒಳ್ಳೆಯದು. ರೈತರು ನಾಳೆ ಇಲ್ಲಿಗೆ ಬರತಕ್ಕದ್ದು ತಪ್ಪತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆ ಸಾಧ್ಯವಾದರೆ ಇವತ್ತು ಇಲ್ಲದಿದ್ದರೆ ನಾಳೆ ಮಾತನಾಡಿ ....

ಶ್ರೀ ಸಿ. ಬೈರೇಗೌಡ : ಇವತ್ತು ತಮ್ಮ ಹೇಳಿಕೆ ಏನಾದರೂ ಬಂದರೆ ನಾಳೆ ರೈತರು ಬರುವ ಕಾರ್ಯಕ್ರಮವನ್ನು ಅವರು ರದ್ದುಮಾಡಲೂಬಹುದು. ಆದ್ದರಿಂದ ಈಗಲೇ ಏನಾದರೂ ಹೇಳಿಕೆ ಮಾಡಿಸುವುದಾದರೆ ಮಾಡಿಸಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ : ರೈತರು ಬರುವುದಕ್ಕೆ ಸುಸ್ವಾಗತ. ಅವರು ಬರುವುದನ್ನು ತಡೆಯುವುದಿಲ್ಲ.

ಶ್ರೀ ಸಿ. ಬೈರೇಗೌಡ : ಅವರು ನಾಳೆ ಬರುವುದಕ್ಕೆ ವ್ಯಾಪಕವಾದ ಕಾರ್ಯಕ್ರಮವನ್ನು ಹಾಕಿಕೊಂಡು ತಯಾರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಿ ಅದರ ವರದಿಯನ್ನು ಕೂಡ ತರಿಸಿಕೊಂಡಿರಿ. ಮಾನ್ಯ ಉಪ ಮುಖ್ಯ ಮಂತ್ರಿಗಳು ಏನೋ ಅನುಕೂಲ ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ. ಅವರು ಯಾವುದಾದರೂ ಒಂದನ್ನು ಪ್ರಕಟಣೆ ಮಾಡಿದರೆ ನಾಳೆ ನಡೆಯತಕ್ಕ ಚಳುವಳಿಯನ್ನು ತಡೆಗಟ್ಟಬಹುದು ಅಷ್ಟೆ. ಇವತ್ತು ಸಂಜೆಯೊಳಗಾಗಿ ಒಂದು ಪರಿಣಾಮಕಾರಿ ಹೇಳಿಕೆಯನ್ನು ಕೊಟ್ಟರೆ ನಾಳೆಯ ಚಳುವಳಿ ನಿಲ್ಲುತ್ತದೆ.

1.15 ಪಿ. ಎಂ.

ಗಮನ ಸೆಳೆಯುವ ಸೂಚನೆ.

ವಿಷಯ : ಗ್ರಾಮಾಂತರ ಅಭ್ಯರ್ಥಿಗಳಿಗೆ ನೀಡುತ್ತಿದ್ದ ಶೇಕಡ 15 ಕೃಪಾಂಕವನ್ನು 15ಕ್ಕೆ ಇಳಿಸಿರುವುದು.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ನೀಡುತ್ತಿದ್ದ ಶೇಕಡಾ 15 ಕೃಪಾಂಕವನ್ನು 15ಕ್ಕೆ ಇಳಿಸಿರುವುದರಿಂದ ಆಗಿರುವ ಅನ್ಯಾಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ.